158ನೇ ಮು ಉ SL.NO:- 53 ದಿ:-16.03.2026

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಟಿ ರವಿ ಇವರ ಶೂನ್ಯ ವೇಳೆಯ ಪ್ರಸ್ತಾವ "ಕಾರ್ಖಾನೆಗಳಿಂದ 1554 ಕೋಟಿ ರೂ. ಕಬ್ಬು ಬಿಲ್ ಬಾಕಿ ಎಂದು ದಿನ ಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುವ ಕುರಿತು" ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಉತ್ತರ.**

**ವಿಷಯ :** ಉತ್ತರ ಕರ್ನಾಟಕದ ಕೃಷಿ ಆರ್ಥಿಕತೆಯ ಪ್ರಮುಖ ಆಧಾರವಾಗಿರುವ ಕಬ್ಬು ಬೆಳೆ ಮತ್ತೊಮ್ಮೆ ಚರ್ಚೆಯ ಕೇಂದ್ರವಾಗಿದೆ. ಕಬ್ಬಿನ ಹಣ ಇನ್ನೂ ಸಂಪೂರ್ಣವಾಗಿ ಪಾವತಿಯಾಗದೇ ಉಳಿದಿರುವುದು ಇದೀಗ ರೈತರ ಆಕ್ರೋಶಕ್ಕೆ ಕಾರಣವಾಗಿದೆ.

2025-26ರ ಸಕ್ಕರೆ ಹಂಗಾಮಿನ ಬಳಿಕವೂ ಬೆಳಗಾವಿ ಜಿಲ್ಲೆಯಲ್ಲಿ ಸುಮಾರು 1,554 ಕೋಟಿ ರೂ. ಕಬ್ಬಿನ ಬಿಲ್ಲು ಬಾಕಿ ಉಳಿದಿರುವುದು ಅಂಕಿ-ಅಂಶಗಳಿಂದ ಸ್ಪಷ್ಟವಾಗಿದೆ. ಈ ಹಿನ್ನಲೆಯಲ್ಲಿ ರೈತರು ಬೆಳಗಾವಿಯ ನಿಜಲಿಂಗಪ್ಪ ಸಕ್ಕರೆ ಕಾರ್ಖಾನೆ ಆಯುಕ್ತರ ಕಚೇರಿಗೆ ಮುತ್ತಿಗೆ ಹಾಕಿ ತಮ್ಮ ಆಕ್ರೋಶ ಹೊರಹಾಕಿದರು.

ಬಾಕಿ ಹಣ ತಕ್ಷಣ ಪಾವತಿಯಾಗದಿದ್ದರೆ ರಾಜ್ಯವ್ಯಾಪಿ ಹೋರಾಟ ಆರಂಭಿಸುವ ಎಚ್ಚರಿಕೆಯನ್ನು ರೈತ ಮುಖಂಡರು ನೀಡಿದ್ದಾರೆ. ಕಬ್ಬು ನುರಿದು ಸಕ್ಕರೆ ಉತ್ಪಾದನೆ ಹೆಚ್ಚಾದರೂ, ಆ ಕಬ್ಬಿನ ಮೂಲವಾದ ರೈತನಿಗೆ ಹಣ ಸಮಯಕ್ಕೆ ಸಿಗದಿದ್ದರೆ ಕೃಷಿ ವ್ಯವಸ್ಥೆಯ ಸಮತೋಲನವೇ ಕುಸಿಯುವ ಸಾಧ್ಯತೆ ಇದೆ. ಆದ್ದರಿಂದ ಕಬ್ಬಿನ ಬಾಕಿ ಬಿಲ್ ಸಮಸ್ಯೆಗೆ ತಕ್ಷಣ ಪರಿಹಾರ ಕಂಡುಹಿಡಿಯುವುದು ಸರ್ಕಾರ ಮತ್ತು ಸಕ್ಕರೆ ಕಾರ್ಖಾನೆಗಳ ಮುಂದೆ ಇರುವ ಅತ್ಯಂತ ತುರ್ತು ಜವಾಬ್ದಾರಿಯಾಗಿದೆ. ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಲು ಅವಕಾಶ ನೀಡುವ ಬಗ್ಗೆ.

**ಉತ್ತರ :** ರಾಜ್ಯದಲ್ಲಿ 2025-26ನೇ ಹಂಗಾಮಿನಲ್ಲಿ 81 ಸಕ್ಕರೆ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿದ್ದು, ದಿನಾಂಕ:28.02.2026ಕ್ಕೆ ಇದ್ದಂತೆ ಒಟ್ಟು 550.06 ಲಕ್ಷ ಮೆ.ಟನ್ ಕಬ್ಬನ್ನು ನುರಿಸಿ, 47.35 ಲಕ್ಷ ಮೆ.ಟನ್ ಸಕ್ಕರೆ ಉತ್ಪಾದಿಸಿರುತ್ತವೆ. ಕಬ್ಬು ಸರಬರಾಜು ಮಾಡಿದ ರೈತರಿಗೆ ಸಕ್ಕರೆ ಕಾರ್ಖಾನೆಗಳು ರೂ.22171.14 ಕೋಟಿಗಳಷ್ಟು ಕಬ್ಬಿನ ಮೊತ್ತ ಪಾವತಿಸಬೇಕಾಗಿರುತ್ತದೆ. ಈ ಪೈಕಿ ರೂ.17430.84 ಕೋಟಿಗಳಷ್ಟು ಪಾವತಿಯಾಗಿದ್ದು, ಇನ್ನು ರೂ.4746.08 ಕೋಟಿಯಷ್ಟು ಪಾವತಿಸಲು ಬಾಕಿ ಇರುತ್ತದೆ. ಕಬ್ಬು ಬಿಲ್ಲು ಪಾವತಿ ಪ್ರಮಾಣ ಶೇ.79 ರಷ್ಟು ಆಗಿರುತ್ತದೆ. ಕೆಲವು ಸಕ್ಕರೆ ಕಾರ್ಖಾನೆಗಳು ರಾಜ್ಯ ಸರ್ಕಾರವು ಘೋಷಿಸಿರುವ ಕಬ್ಬಿನ ಬೆಲೆಗಿಂತ ಹೆಚ್ಚಿನ ಮೊತ್ತವನ್ನು ಪಾವತಿಸಿರುತ್ತವೆ.

ಪ್ರಸ್ತುತ 2025-26ನೇ ಹಂಗಾಮು ನವೆಂಬರ್ 2025 ರಿಂದ ಪ್ರಾರಂಭವಾಗಿದ್ದು, ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಸಕಾಲದಲ್ಲಿ ಕಬ್ಬಿನ ಬಿಲ್ಲನ್ನು ಪಾವತಿಸದೇ ಇರುವುದರಿಂದ ಕಬ್ಬು(ನಿಯಂತ್ರಣ) ಆದೇಶ 1966 ರ ಕಲಂ 3(8) ರಡಿಯಲ್ಲಿ ಶಾಸನಬದ್ಧ ನೋಟೀಸ್‌ಗಳನ್ನು ಜಾರಿಗೊಳಿಸಲಾಗಿದೆ.

...2

ಪ್ರಸ್ತುತ ಹಂಗಾಮು ಚಾಲ್ತಿಯಲ್ಲಿದ್ದು 81 ಕಾರ್ಯನಿರತ ಸಕ್ಕರೆ ಕಾರ್ಖಾನೆಗಳ ಪೈಕಿ 63 ಸಕ್ಕರೆ ಕಾರ್ಖಾನೆಗಳು ಹಂಗಾಮನ್ನು ಮುಕ್ತಾಯಗೊಳಿಸಿರುತ್ತವೆ ಮತ್ತು 18 ಸಕ್ಕರೆ ಕಾರ್ಖಾನೆಗಳು ಹಾಲಿ ಕಾರ್ಯನಿರ್ವಹಿಸುತ್ತಿವೆ. ಆದ್ದರಿಂದ ರೈತರಿಗೆ ಬಾಕಿ ಕಬ್ಬು ಬಿಲ್ಲು ಪಾವತಿಸಲು ಕಾರ್ಖಾನೆಗಳಿಗೆ ಅವಕಾಶವಿರುತ್ತದೆ.

ಇದಲ್ಲದೇ, ದಿನಾಂಕ:28.02.2026 ಕ್ಕೆ ಇದ್ದಂತೆ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಶೇ. 60 ಕ್ಕಿಂತ ಕಡಿಮೆ ಕಬ್ಬು ಬಿಲ್ಲು ಪಾವತಿಸಿರುವ ಸಕ್ಕರೆ ಕಾರ್ಖಾನೆಗಳಿಗೆ ಪರಿಶೀಲನೆಗಾಗಿ ಜಿಲ್ಲಾಮಟ್ಟದಲ್ಲಿ ತಂಡಗಳನ್ನು ರಚಿಸಲಾಗಿದೆ. ಸದರಿ ಸಮಿತಿಗಳು ಕಾರ್ಖಾನೆಗಳು ಅರೆದಿರುವ ಕಬ್ಬಿನ ಪ್ರಮಾಣ, ಕಾರ್ಖಾನೆಯು ಪ್ರತಿ ಮೆ.ಟನ್ ಕಬ್ಬಿಗೆ ಪಾವತಿಸುತ್ತಿರುವ ಮೊತ್ತ, ಅದರಂತೆ ರೈತರಿಗೆ ಪಾವತಿಸಬೇಕಾದ ಒಟ್ಟು ಮೊತ್ತ, ಪಾವತಿಸಿರುವ ಮೊತ್ತ, ಪಾವತಿಸಲು ಬಾಕಿ ಇರುವ ಮೊತ್ತ ಮತ್ತು ಕಾರ್ಖಾನೆಯು ಕೇಂದ್ರ ಸರ್ಕಾರದಿಂದ ಪ್ರತಿ ಮಾಹೆಯಾನ ಹಂಚಿಕೆಯಾಗಿರುವ ಸಕ್ಕರೆ ಮಾರಾಟದಿಂದ ಲಭ್ಯವಾಗಿರುವ ಮೊತ್ತವನ್ನು ರೈತರಿಗೆ ಪಾವತಿಸಲು ಉಪಯೋಗಿಸಲಾಗಿದೆಯೇ ಅಥವಾ ಇಲ್ಲವೇ, ಸಕ್ಕರೆ ದಾಸ್ತಾನು ಇತ್ಯಾದಿ ವಿವರಗಳನ್ನು ಕಾರ್ಖಾನೆಯ ಲೆಕ್ಕ ಪತ್ರಗಳೊಂದಿಗೆ ಪರಿಶೀಲಿಸಿ ವರದಿ ನೀಡುವಂತೆ ಸೂಚಿಸಲಾಗಿದೆ. ಸದರಿ ತಂಡಗಳು ಕಾರ್ಖಾನೆಗಳಿಗೆ ಖುದ್ದಾಗಿ ಬೇಟಿ ನೀಡಿ ಕಾರ್ಖಾನೆಗಳು ಬಾಕಿ ಉಳಿಸಿಕೊಂಡಿರುವ ಕಬ್ಬು ಬಿಲ್ಲು ಮೊತ್ತವನ್ನು ವಿಳಂಬವಾಗಿ ಪಾವತಿ ಮಾಡಿರುವ ಸಂಬಂಧ ಕಾರ್ಖಾನೆಯ ವಿರುದ್ಧ ಕಬ್ಬು(ನಿಯಂತ್ರಣ) ಆದೇಶ 1966 ರಲ್ಲಿನ ಅವಕಾಶಗಳಂತೆ ವಸೂಲಾತಿ ದೃಢೀಕರಣ ಪತ್ರ(Recovery Certificate) ಹೊರಡಿಸುವ ಬಗ್ಗೆ ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸಲು ಸಹ ಸೂಚಿಸಲಾಗಿರುತ್ತದೆ.

ಬೆಳಗಾವಿ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳು ದಿನಾಂಕ:28.02.2026ಕ್ಕೆ ಇದ್ದಂತೆ ಒಟ್ಟು 204.99 ಲಕ್ಷ ಮೆ.ಟನ್ ಕಬ್ಬನ್ನು ನುರಿಸಿ, 18.65 ಲಕ್ಷ ಮೆ.ಟನ್ ಸಕ್ಕರೆ ಉತ್ಪಾದಿಸಿರುತ್ತವೆ. ಕಬ್ಬು ಸರಬರಾಜು ಮಾಡಿದ ರೈತರಿಗೆ ಸಕ್ಕರೆ ಕಾರ್ಖಾನೆಗಳು ರೂ.8545.04 ಕೋಟಿಗಳಷ್ಟು ಕಬ್ಬಿನ ಮೊತ್ತ ಪಾವತಿಸಬೇಕಾಗಿರುತ್ತದೆ. ಈ ಪೈಕಿ ರೂ.6996.34 ಕೋಟಿಗಳಷ್ಟು ಪಾವತಿಯಾಗಿದ್ದು, ಇನ್ನು ರೂ.1554.47 ಕೋಟಿಯಷ್ಟು ಪಾವತಿಸಲು ಬಾಕಿ ಇರುತ್ತದೆ. ಬೆಳಗಾವಿ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳು ಶೇ. 82 ರಷ್ಟು ಕಬ್ಬಿನ ಬಿಲ್ಲನ್ನು ಪಾವತಿಸಿರುತ್ತವೆ. ಶೇ. 75 ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಕಬ್ಬಿನ ಬಿಲ್ಲನ್ನು ಪಾವತಿಸಿರುವ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ದಿನಾಂಕ:09.03.2026 ರಂದು ಶಾಸನಬದ್ಧ ನೋಟೀಸ್‌ನ್ನು ಜಾರಿಗೊಳಿಸಲಾಗಿದ್ದು, ಕಬ್ಬು ಬಿಲ್ಲು ಪಾವತಿಸುವಂತೆ ಕಾರ್ಖಾನೆಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿರುತ್ತದೆ.

ದಿನಾಂಕ:15.03.2026ಕ್ಕೆ ಇದ್ದಂತೆ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ ಪಾವತಿಸಬೇಕಾಗಿರುವ ಕಬ್ಬಿನ ಮೊತ್ತ ಮತ್ತು ಪಾವತಿಸಿರುವ ಮೊತ್ತದ ವಿವರಗಳನ್ನು ಕಾರ್ಖಾನೆಗಳಿಂದ ಪಡೆಯಲಾಗುವುದು. 2025-26ನೇ ಹಂಗಾಮು ಮುಕ್ತಾಯಗೊಳಿಸಿದ ಸಕ್ಕರೆ ಕಾರ್ಖಾನೆಗಳು ಕಬ್ಬಿನ ಬಿಲ್ಲನ್ನು ಪಾವತಿಸದೇ ಇದ್ದರೆ ಕಬ್ಬು(ನಿಯಂತ್ರಣ) ಆದೇಶ 1966 ಕಲಂ 3(8) ರನ್ವಯ ಕಾರ್ಖಾನೆಗಳಿಗೆ ವಸೂಲಾತಿ ದೃಢೀಕರಣ ಪತ್ರ (Recovery Certificate) ವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮೂಲಕ ಹೊರಡಿಸಿ, ರೈತರ ಬಾಕಿ ಕಬ್ಬು ಬಿಲ್ಲು ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

**ಸಂಖ್ಯೆ:** ಸಿಐ 141 ಎಸ್‌ಜಿಎಫ್ 2026

**(ಶಿವಾನಂದ ಎಸ್. ಪಾಟೀಲ)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು